**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ 105/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಶಾಹೀನ ತಾಜ್ | **ಪಿಡಬ್ಲ್ಯೂ: 1** |
| ಗಂಡನ ಹೆಸರು | : ರೆಹಮತುಲ್ಲಾ | ಸಿಡಬ್ಲ್ಯೂ: 1 |
| ವಯಸ್ಸು | : 56 ವರ್ಷ | |
| ಉದ್ಯೋಗ | : ಗೃಹಿಣಿ | |
| ವಾಸಸ್ಥಳ | : ಕಲ್ಯಾಣಗಿರಿ, ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 07.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ. ನಾನು 15 ವರ್ಷದಿಂದ ಬೀಡಿ ಕಟ್ಟುವ ಕೆಲಸ ಮಾಡಿಕೊಂಡು ಈಗ ವಯಸ್ಸಿನ ಕಾರಣ ಮಾಡುತ್ತಿಲ್ಲ. ನನ್ನ ಗಂಡ ತೀರಿಕೊಂಡು 15 ವರ್ಷಗಳಾಗಿರುತ್ತವೆ. ನನಗೆ 5 ಜನ ಮಕ್ಕಳು. ಅದರಲ್ಲಿ 4 ಜನ ಗಂಡು ಮಕ್ಕಳು ಇದ್ದು, ಒಂದು ಹೆಣ್ಣು ಮಗು ಇರುತ್ತದೆ. ನನ್ನ ಮಗಳಿಗೆ ಮದುವೆಯಾಗಿರುತ್ತದೆ. ನನಗೆ ಸಯ್ಯದ ಮುದಶೀರ, ಸಯ್ಯದ ಮುಜಾಮಿಲ್, ಸಯ್ಯದ್ ಮುಜಾಹಿದ್, ಸಯ್ಯದ ತನ್ವೀರ್ ಎಂದು 4 ಗಂಡು ಮಕ್ಕಳು ಇರುತ್ತಾರೆ. ಸಯ್ಯದ ಮುದಶೀರ ಗಾರೆ ಕೆಲಸ ಮಾಡಿಕೊಂಡಿದ್ದ, ಇನ್ನುಳಿದ ಮಕ್ಕಳು ಟೈಲ್ಸ ಕೆಲಸ ಮಾಡಿಕೊಂಡಿದ್ದರು. ನಾವೆಲ್ಲರೂ ಒಟ್ಟಿಗೆಯೇ ವಾಸವಿದ್ದೆವು. ಸಯ್ಯದ ಮುದಶೀರ ಮನೆಯ ಪಕ್ಕದಲ್ಲಿ ಛತ್ರವಿದ್ದು ಆತ ಅಲ್ಲಿ ಹೋಗಿ ಮಲುಗಿಕೊಳ್ಳುತ್ತಿದ್ದನು. ಆತನಿಗೆ ಅಲ್ಲಿ

ಹೋಗಿ ಮಲುಗಿಕೊಳ್ಳುವ ರೂಢಿಯಾಗಿದ್ದು ಹಾಗಾಗಿ ಅಲ್ಲಿಯೇ ಹೋಗಿ ಮಲುಗಿಕೊಳ್ಳುತ್ತಿದ್ದ. ಆರೋಪಿಯ ಪರಿಚಯ ಇರುತ್ತದೆ. ಆತ ಮತ್ತು ನನ್ನ ಮಗ ಸಯ್ಯದ ಮುದಶೀರ್ ಜೊತೆಯಲ್ಲಿಯೇ ಇರುತ್ತಿದ್ದರು. ನನ್ನ ಮಗ ಸಯ್ಯದ ಮುದಶೀರ್ ತೀರಿಕೊಂಡು ಈಗ 11 ತಿಂಗಳು ಆಗಿರುತ್ತದೆ.

2. ದಿನಾಂಕ 07.01.2024 ರಂದು ಬೆಳಿಗ್ಗೆ 6.00 ಗಂಟೆಗೆ ಪಕ್ಕದ ಬೀದಿಯ ಬಿಬಿ ಜಾನ್ ರವರು ನಮ್ಮ ಮನೆಯ ಬಳಿ ಬಂದು ನನ್ನ ಮಗ ಸಯ್ಯದ ಮುದಶೀರರವರನ್ನು ಛತ್ರದಲ್ಲಿ ಹೊಡೆದು ಬಿಟ್ಟಿರುತ್ತಾರೆ ಎಂದು ಹೇಳಿದರು. ತಕ್ಷಣ ನಾನು ಅಲ್ಲಿಗೆ ನೋಡಿರುತ್ತೇನೆ. ನಾನು ಅಲ್ಲಿಗೆ ಹೋಗಿ ನೋಡಿದಾಗ ಆರೋಪಿ ಇದ್ದು ಮತ್ತು ಇನ್ನು 4–5 ಜನ ಇದ್ದರು. ನಾನು ನನ್ನ ಮಗನನ್ನು ನೋಡಿದ್ದಾಗ ನನ್ನ ಮಗನ ತಲೆಗೆ ಏಟಾಗಿದ್ದು, ಆತ ಮಲಗಿದ್ದ ಸ್ಥಿತಿಯಲ್ಲಿ ಇದ್ದನು. ನನ್ನ ಮಗನಿಗೆ ಜೀವ ಇರಲಿಲ್ಲ. ಅಲ್ಲಿಯೇ ಇದ್ದ ಆರೋಪಿಯನ್ನು ಏನಾಯಿತು ಎಂದು ನಾನು ವಿಚಾರಿಸಿದ್ದಾಗ ಆತ ನನ್ನ ಮಗನಿಗೆ 100 ರೂ. ಕೇಳಿದ್ದು ನನ್ನ ಮಗ ಕೊಡದಿದ್ದ ಕಾರಣ ಆತನನ್ನು ಹೊಡೆದಿರುತ್ತೇನೆ ಎಂದು ಹೇಳಿರುತ್ತಾನೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇ ಎ ಒ**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**